**ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನ್ನ ತಂದೆಯ ಹೆಸರು ಚಿಪ್ಪಲಮಡುಗು ಚಿನ್ನಪ್ಪ. ನನ್ನ ತಾಯಿಯ ಹೆಸರು ಚಿಪ್ಪಲಮಡುಗು ಚನ್ನಮ್ಮ. ನನಗೆ ಈಗ 58 ವರ್ಷ ವಯಸ್ಸು ಆಗಿರುತ್ತದೆ. ನನ್ನ ತಂದೆಗೆ ನಾನೊಬ್ಬನೆ ಮಗ. ನಾನು 5ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನೇ ಚಿಪ್ಪಲಮಡುಗು ರಮನಪ್ಪ ಎಂದು ತೋರಿಸಲು ಆಧಾರ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ನನ್ನ ತಾಯಿಗೆ 92 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ 83 ವರ್ಷ ವಯಸ್ಸು ಆಗಿತ್ತು. ನನ್ನ ತಾಯಿಯ ಆಧಾರ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ನನ್ನ ತಾಯಿ ನನ್ನ ಜೊತೆ ವಾಸವಾಗಿದ್ದರು. ನಾನು ವ್ಯವಸಾಯ ಮಾಡುತ್ತೇನೆ. ನನ್ನ ತಾಯಿಗೆ ವಯಸ್ಸಾದ ಕಾರಣ ದೈಹಿಕ ಚೈತನ್ಯ ಇರಲಿಲ್ಲ ಮತ್ತು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ವಯೋ ಸಹಜ ಕಾಯಿಲೆಗಳು ಇತ್ತು ಎಂದರೆ ಸರಿಯಲ್ಲ.

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತವಾದ ಸಮಯದಲ್ಲಿ ನನ್ನ ತಾಯಿಯೊಂದಿಗೆ ಮನೆಯವರು ಇರಲಿಲ್ಲ, ಸಾರ್ವಜನಿಕರು ನೋಡಿರುತ್ತಾರೆ. ಅಪಘಾತದ ಬಗ್ಗೆ ದೂರನ್ನು ನೀಡಿದವರ ಹೆಸರು ನನಗೆ ಗೊತ್ತಿಲ್ಲ. ಚಿಪ್ಪಲಮಡುಗು ರಾಮಾಂಜಿನಪ್ಪ ನನ್ನ ಮಗ. ನನಗೆ ತೆಲಗು ಓದಲು ಬರುತ್ತದೆ. ನಿಪಿ 2 ರಲ್ಲಿ ನನ್ನ ತಾಯಿ ರಸ್ತೆ ದಾಟುವ ಸಂದರ್ಭದಲ್ಲಿ ಅಪಘಾತ ಆಗಿರುವುದಾಗಿ ನಮೂದು ಇದೆ ಎಂದರೆ ಸಾಕ್ಷಿಯು ಅದರಲ್ಲಿ ಇರಬಹುದು, ಆದರೆ ರಸ್ತೆ ದಾಟುವಾಗ ಅಪಘಾತವಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ ನಿಪಿ 4ರಲ್ಲಿಯೂ ಸಹ ರಸ್ತೆ ದಾಟುವ ಸಂದರ್ಭದಲ್ಲಿ ಅಪಘಾತವಾದ ಬಗ್ಗೆ ನಮೂದು ಇದೆ ಎಂದರೆ ಸರಿ ಇರುವುದಿಲ್ಲ. ಅಪಘಾತವಾದ ಸ್ಥಳವನ್ನು ನಾನು ನೋಡಿರುತ್ತೇನೆ. ಪೊಲೀಸರು ತಯಾರಿಸಿದ ನಕಾಶೆಯಲ್ಲಿ ಅಪಘಾತ ರಸ್ತೆಯ

ಮಧ್ಯಭಾಗದಲ್ಲಿ ಆದ ಬಗ್ಗೆ ನಮೂದು ಇದೆ ಎಂದರೆ ಸರಿಯಲ್ಲ. ಲಾರಿಯ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಲಾರಿ ತಮಿಳುನಾಡಿಗೆ ಸೇರಿದ್ದು ಎಂದರೆ ಸರಿ. ನನ್ನ ತಾಯಿಗೆ ವಯಸ್ಸಾದ ಕಾರಣ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ವಯಸ್ಸಾದ ಕಾರಣ ಆಕೆಗೆ ಕಣ್ಣು ಸಹ ಸರಿಯಾಗಿ ಕಾಣದೇ ಇದ್ದು ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ಅಜಾಗರೂಕತೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಾನು ವಾರಸುದಾರನಾಗಿರುವುದಿಲ್ಲ ಎಂದರೆ ಸರಿಯಲ್ಲ. ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**